# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಸ್ಪೆಷಲ್ ಕೇಸ್ ನಂ. 25/2020**

**ದೋ.ಸಾ. : 12 ಫ್ರಾ.ಸಾ. : 12**

| | | |
|---|---|---|
| ಸಾಕ್ಷಿಯ ಹೆಸರು | : | ಡಾಃ ಶಮ್ಸ್ ನೂರ್ |
| ತಂದೆಯ ಹೆಸರು | : | ಮಹಮ್ಮದ್ ಇಮ್ರಾನ್ ಖಾನ್ |
| ವಯಸ್ಸು | : | 35 ವರ್ಷ |
| ಕೆಲಸ | : | ಸ್ತ್ರೀ ರೋಗ ತಜ್ಞರು , ತಾಲೂಕ ಸರಕಾರಿ ಆಸ್ಪತ್ರೆ, ಭಟ್ಕಳ |
| ವಾಸ | : | ಭಟ್ಕಳ |

**ದಿನಾಂಕಃ 20-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. 2019 ರಿಂದ 2021 ರವರಗೆ ನಾನು ಭಟ್ಕಳ ತಾಲೂಕು ಸರಕಾರಿ ಆಸ್ಪತ್ರೆಯಲ್ಲಿ ಸ್ತ್ರೀ ರೋಗ ತಜ್ಞರು ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 06-01-2020 ರಂದು ನಾನು ಭಟ್ಕಳ ತಾಲೂಕು ಸರಕಾರಿ ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿದ್ದಾಗ, ರಾತ್ರಿ 10-00 ಗಂಟೆಗೆ ಚಾಸಾ-1 ರವರನ್ನು ಚಾಸಾ-4 ರವರು ಹಲ್ಲೆಯ ಹಿನ್ನಲೆಯಲ್ಲಿ ಚಿಕಿತ್ಸೆಗಾಗಿ ಕರೆದುಕೊಂಡು ಬಂದಿದ್ದು, ನಾನು ಚಾಸಾ-1 ರವರನ್ನು ಪರೀಕ್ಷಿಸಿದಾಗ, ಅವರ ಮುಖದ ಎಡ ಭಾಗದಲ್ಲಿ ನೋವು ಇದೆ ಎಂದು ಹೇಳಿದ್ದು, ನಾನು ಅವರ ಮುಖದ ಎಡಭಾಗವನ್ನು ಮುಟ್ಟಿದಾಗ ನೋವು ಕಂಡುಬಂದಿರುತ್ತದೆ. ಆ ನಂತರ ನಾನು ಚಾಸಾ-1 ರವರ ನೋವಿಗೆ ಚಿಕಿತ್ಸೆ ನೀಡಿರುತ್ತೇನೆ ಹಾಗೂ ಚಿಕಿತ್ಸೆ ನೀಡಿದ ಬಗ್ಗೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಯು ತಾನು ನೀಡಿದ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-40 ಎಂದು, ಸಾಕ್ಷಿಯ ಸಹಿಯನ್ನು ನಿಪಿ-40(ಎ) ಎಂದು ಗುರುತಿಸಲಾಯಿತು. ನಿಪಿ-40 ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಗಾಯವು ಸಾದಾ ಸ್ವರೂಪದ ಗಾಯವಾಗಿರುತ್ತದೆ. ಯಾವುದೇ ಒಬ್ಬ ವ್ಯಕ್ತಿಗೆ ಕೈಯಿಂದ ಹೊಡೆದರೆ ನಿಪಿ-40 ರಲ್ಲಿ ನಮೂದಿಸಿರುವಂತೆ ನೋವು ಕಂಡುಬರುವ ಸಾಧ್ಯತೆ ಇರುತ್ತದೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಜಿ.ಟಿ.ಎನ್ ವಕೀಲರಿಂದ**

3. ಚಾಸಾ–1 ರವರನ್ನು ಪರೀಕ್ಷೆ ಮಾಡಿದಾಗ ಅವರ ಮುಖದ ಮೇಲೆ ಯಾವುದೇ ರೀತಿಯ ಗಾಯಗಳು ಕಂಡುಬಂದಿರುವುದಿಲ್ಲ. ಮೇಲ್ನೋಟಕ್ಕೆ ನನಗೆ ಯಾವುದೇ ಗಾಯ ಅಥವಾ ನೋವು ಕಂಡುಬಂದಿರುವುದಿಲ್ಲ, ಆದರೆ ಚಾಸಾ–1 ರವರು ಹೇಳಿದ ಮೇರೆಗೆ ಅವರಿಗೆ ನೋವು ಇದೆ ಎಂದು ತಿಳಿದು ಬಂತು ಎಂದರೆ ಸರಿ. ಅದೇ ರೀತಿ ನಿಪಿ–40 ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿರುತ್ತೇನೆ ಎಂದರೆ ಸರಿ. ಸಾಮಾನ್ಯವಾಗಿ ಒಬ್ಬ ವ್ಯಕ್ತಿಗೆ ಕೈಯಿಂದ ಬಲವಾಗಿ ಕೆನ್ನೆಗೆ ಹೊಡೆದರೆ ಅವರ ಬೆರಳುಗಳ ಗುರುತು ಕಂಡುಬರುತ್ತದೆ ಎಂದರೆ ಸರಿ. ನಿಪಿ–40 ರಲ್ಲಿ ನಮೂದಿಸಿರುವ ಗಾಯ ಸಾಮಾನ್ಯವಾಗಿ ಯಾವುದೇ ಘನ ವಸ್ತುಗಳಿಗೆ ಮುಖ ಬಡಿದರೆ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಅದೇ ರೀತಿ ಬಾಯಿಯ ಒಳಗೆ ಏನಾದರೂ ಹಲ್ಲು ನೋವು, ಹುಣ್ಣು ಅಥವಾ ನೋವು ಇದ್ದಲ್ಲಿ ನಿಪಿ–40 ರಲ್ಲಿ ನಮೂದಿಸಿರುವ ಗಾಯ ಅಥವಾ ನೋವು ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಚಾಸಾ–1 ರವರಿಗೆ ಯಾವುದೇ ನೋವು ಅಥವಾ ಗಾಯವಾಗಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾನು ಅವರಿಗೆ ಯಾವುದೇ ಚಿಕಿತ್ಸೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

4. ಸಾಮಾನ್ಯವಾಗಿ ಒಬ್ಬ ವ್ಯಕ್ತಿಗೆ ಹೊಡೆದ ನಂತರ 10–12 ಗಂಟೆಗಳ ಅವಧಿಯ ನಂತರ ಗುರುತು ಕಂಡುಬರುವ ಸಾಧ್ಯತೆ ಕಡಿಮೆ ಇರುತ್ತದೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಜಿ.ಟಿ.ಎನ್ ವಕೀಲರಿಂದ**

5. ಮನುಷ್ಯನ ಮುಖ ಬಹಳ ಮೃದು ಮತ್ತು ಸೂಕ್ಷ್ಮ ಎಂದರೆ ಸರಿ. ಸಾಮಾನ್ಯವಾಗಿ ಒಬ್ಬ ವ್ಯಕ್ತಿಗೆ ಕೈಯಿಂದ ಬಲವಾಗಿ ಕೆನ್ನೆಗೆ ಹೊಡೆದರೆ ಆ ಜಾಗದಲ್ಲಿ ಬಹಳ ಸಮಯದವರೆಗೆ ಗುರುತು ಕಂಡುಬರುತ್ತದೆ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/–

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ